# ಬೋಧಕರ ವಿವರ

೧. ಹೆಸರು : ಡಾ. ಎಸ್. ವೈ. ಸೋಮಶೇಖರ್

೨. ಜನ್ಮ ದಿನಾಂಕ : ೨೮.೦೬.೧೯೬೦

೩. ವಿದ್ಯಾರ್ಹತೆ :

೧. ಎಂ.ಎ., (೧೯೯೧-೯೩) **ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ,** ಮೈಸೂರು ವಿಶ್ವವಿದ್ಯಾನಿಲಯ,

೨. ಎಂ.ಫಿಲ್., (೧೯೯೩-೯೪), **ಹಂಪೆಯ ಬಜಾರುಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಪಿಎಚ್.ಡಿ., (೨೦೦೦), **ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ,** ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. **ಸ್ನಾತಕೋತ್ತರ ಡಿಪ್ಲೋಮಾ** (೧೯೯೩), **ಭಾರತೀಯ ಸಾಹಿತ್ಯ,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೫. **ಸ್ನಾತಕೋತ್ತರ ಡಿಪ್ಲೋಮಾ** (೨೦೦೩-೦೪), **ಶಾಸನಶಾಸ್ತ್ರ,** ಕನ್ನಡ ವಿಶ್ವವಿದ್ಯಾಲಯ


೪. ಸಂಪರ್ಕ ವಿಳಾಸ : **ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,**
**ಕನ್ನಡ ವಿಶ್ವವಿದ್ಯಾಲಯ, ಹಂಪಿ,** ವಿದ್ಯಾರಣ್ಯ-೫೮೩ ೨೭೬,
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ, ಕರ್ನಾಟಕ.

೫. ಸ್ಥಿರ ದೂರವಾಣಿ ಸಂಖ್ಯೆ : ೦೮೩೯೪-೨೪೧೩೩೫, ವಿಸ್ತರಣೆ ಸಂಖ್ಯೆ -೩೨೧

೬. ಫ್ಯಾಕ್ಸ್ ಸಂಖ್ಯೆ : ೦೮೩೯೪-೨೪೧೩೩೫

೭. ಇ ಮೇಲ್ ವಿಳಾಸ : **sysshekhar@gmail.com**


೮. ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ವಿಭಾಗ : ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

೯. ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಹುದ್ದೆ : ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

೧೦. ವಿಷಯ ತಜ್ಞತೆ : ೧. ಇತಿಹಾಸ ೨. ಪುರಾತತ್ವಶಾಸ್ತ್ರ ೩. ಕಲೆ ಮತ್ತು ವಾಸ್ತುಶಿಲ್ಪ

೧೧. ಅಧ್ಯಯನ ನಡೆಸುತ್ತಿರುವ ಆಸಕ್ತಿಯ ಕ್ಷೇತ್ರಗಳು :

೧. ಇತಿಹಾಸ ೩. ಸ್ಥಳನಾಮ ಮತ್ತು ಐತಿಹ್ಯಗಳು

೨. ಪುರಾತತ್ವಶಾಸ್ತ್ರ ೪. ಕಲೆ ಮತ್ತು ವಾಸ್ತುಶಿಲ್ಪ

೧೨. ಪೂರ್ಣಗೊಂಡ ಯೋಜನೆಗಳ ವಿವರ :

೧. **ಕೃಷ್ಣಾ ಮೇಲ್ದಂಡೆ ಯೋಜನೆಯ ಮುಳುಗಡೆ ಗ್ರಾಮಗಳ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ,** ನೆರವು : ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟೆ

ಕೃಷ್ಣಾ ಮೇಲ್ದಂಡೆ ಯೋಜನೆಯ ಮುಳುಗಡೆ ಗ್ರಾಮಗಳ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನವೆಂಬುದು ಆಲಮಟ್ಟಿ ಅಥವಾ ಲಾಲ್ ಬಹದ್ದೂರ್ ಶಾಸ್ತ್ರಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಿದ ಗ್ರಾಮಗಳು ಹಾಗೂ ಅಲ್ಲಿನ ಪ್ರಾಚೀನ ಸ್ಮಾರಕಗಳ ದಾಖಲೆಯಾಗಿದೆ. ಈ ಜಲಾಶಯದಲ್ಲಿ ೨೦೦ ಗ್ರಾಮಗಳು ಮುಳುಗಡೆಯಾಗುವ ಹಿನ್ನೆಲೆಯಲ್ಲಿ ಅವುಗಳ ಅಧ್ಯಯನ ಬಹಳ ಸೂಕ್ತವೆಂಬುದನ್ನು ಅರಿತು ಕನ್ನಡ



PDF created with pdfFactory trial version www.pdffactory.com

ವಿಶ್ವವಿದ್ಯಾಲಯ ಮತ್ತು ಕೃಷ್ಣಾ ಮೇಲ್ದಂಡೆ ಅಭಿವೃದ್ದಿ ಪ್ರಾಧಿಕಾರಗಳ ನೆರವಿನಿಂದ ಈ ಬೃಹತ್ ಯೋಜನೆಯನ್ನು ರೂಪಿಸಲಾಗಿದೆ.

೨. **ಹಂಪಿ ವಿಜಯನಗರ ಪರಾಮರ್ಶನ ಗ್ರಂಥಲೇಖನ ಸೂಚಿ,** ನೆರವು: ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ನವದೆಹಲಿ

ವಿಜಯನಗರ ಸಾಮ್ರಾಜ್ಯವು ಮಧ್ಯಯುಗದ ಅತ್ಯಂತ ಪ್ರಬಲ ಹಾಗೂ ಪ್ರಮುಖ ಸಾಮ್ರಾಜ್ಯವಾಗಿದೆ. ಈ ಸಾಮ್ರಾಜ್ಯವು ಸುಮಾರು ೨೫೦ ವರ್ಷಗಳ ಆಳ್ವಿಕೆಯನ್ನು ದಕ್ಷಿಣ ಭಾರತದಲ್ಲಿ ನಡೆಸಿ ತನ್ನ ಪಾರಮ್ಯವನ್ನು ನಾಡಿನೆಲ್ಲೆಡೆ ಮೆರೆದಿದೆ. ಇದಕ್ಕೆ ಸಾಕ್ಷಿಯಾಗಿ ಸ್ಮಾರಕಾವಶೇಷಗಳು, ಶಾಸನಗಳು, ಸಾಹಿತ್ಯ ಕೃತಿಗಳು ಇಂದಿಗೂ ಉಳಿದುಬಂದಿವೆ. ಈ ಆಕರಗಳ ಕುರಿತ ಅಧ್ಯಯನ ಹಾಗೂ ವಿಶ್ಲೇಷಣೆಗಳು ಸಾಕಷ್ಟು ಆಗಿರುವುದನ್ನು ಹೊರಬಂದಿರುವ ಕೃತಿಗಳಿಂದ ತಿಳಿಯಬಹುದು. ಇಂತಹ ಪ್ರಕಟಣೆಗಳ ದಾಖಲಾತಿಯೇ ಹಂಪಿ ವಿಜಯನಗರ ಗ್ರಂಥಲೇಖನ ಸೂಚಿ. ಇಲ್ಲಿ ಇದುವರೆಗೆ ಹಂಪಿ ಹಾಗೂ ವಿಜಯನಗರ ಸಾಮ್ರಾಜ್ಯವನ್ನು ಕುರಿತಂತೆ ಹೊರಬಂದಿರುವ ಎಲ್ಲ ಬಗೆಯ ಕೃತಿಗಳು, ಆಕರಸಾಮಗ್ರಿಗಳನ್ನು ಓದುಗರಿಗೆ, ಸಂಶೋಧಕರಿಗೆ ಒದಗಿಸಿಕೊಡುವ ಉದ್ದೇಶದಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

೩. **ಕರ್ನಾಟಕ ದೇವಾಲಯ ಕೋಶ : ಬಳ್ಳಾರಿ ಜಿಲ್ಲೆ,** ೧೯೯೯, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕರ್ನಾಟಕ ದೇವಾಲಯ ಕೋಶ ಎಂಬುದು ಪ್ರಾಚೀನ ಇತಿಹಾಸಮತ್ತು ಪುರಾತತ್ವ ಅಧ್ಯಯನ ವಿಭಾಗದ ಮಹತ್ತರ ಯೋಜನೆ. ಕನ್ನಡ ನಾಡಿನ ಶಿಲ್ಪಕಲಾ ಪ್ರಪಂಚದ ಬಹುದೊಡ್ಡ ಆಸ್ತಿಯಾಗಿರುವ ದೇವಾಲಯಗಳು ನೈಸರ್ಗಿಕ ಆಘಾತ, ಸಾಮಾಜಿಕ ಉಪೇಕ್ಷೆಗಳಿಂದಾಗಿ ಶಿಥಿಲವಾಗುತ್ತಾ ಸಾಗಿವೆ. ಇವು ನಾಶವಾಗುವ ಮುನ್ನ ಈ ಕಲಾಕೃತಿಗಳನ್ನು ದಾಖಲಿಸಬೇಕೆಂಬ ಮಹತ್ವಾಕಾಂಕ್ಷೆಯ ಯೋಜನೆಯನ್ನು ವಿಭಾಗವು ಹಮ್ಮಿಕೊಂಡಿದೆ. ಅದರನ್ವಯ ಕರ್ನಾಟಕದ ಪ್ರಾಚೀನ ಸಂಸ್ಕೃತಿಯನ್ನು ಪ್ರತಿನಿಧಿಸುವ ದೇವಾಲಯಗಳನ್ನು ಒಂದೆಡೆ ತಂದು ಸಂಶೋಧಕ ವಿದ್ವಾಂಸರಿಗೆ ಅಧ್ಯಯನಕ್ಕೆ ಅನುವು ಮಾಡಿಕೊಡುವ ಪ್ರಯತ್ನವಾಗಿದೆ. ಕರ್ನಾಟಕದಲ್ಲಿರುವ ಸ್ಮಾರಕಗಳ ದಾಖಲೀಕರಣದ ದೃಷ್ಟಿಯನ್ನಿಟ್ಟುಕೊಂಡು ಬೃಹತ್ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯ ಅಡಿಯಲ್ಲಿ ಪ್ರತಿ ಜಿಲ್ಲೆಯ ಗ್ರಾಮಗಳಲ್ಲಿರುವ ಪ್ರಾಚೀನ ಸ್ಮಾರಕಗಳನ್ನು ಕ್ಷೇತ್ರಕಾರ್ಯದ ಮೂಲಕ ದಾಖಲಿಸಿ ಗ್ರಂಥರೂಪದಲ್ಲಿ ಪ್ರಕಟಿಸುತ್ತ ಬಂದಿದೆ. ಈ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಪ್ರಾಚೀನ ದೇವಾಲಯಗಳನ್ನು ತಾಲೂಕುವಾರು ವಿಭಾಗಿಸಿ ಈ ಕೃತಿಯಲ್ಲಿ ವಿವರಗಳನ್ನು ನೀಡಲಾಗಿದೆ. ಇಲ್ಲಿ ಕಲೆ ಮತ್ತು ವಾಸ್ತುಶಿಲ್ಪವಲ್ಲದೆ ಶಾಸನ ಮತ್ತಿತರ ಆಕರಗಳ ಮೂಲಕ ಅಧಿಕೃತ ಮಾಹಿತಿಯನ್ನು ನೀಡಲಾಗಿದೆ.

೪. **ಕರ್ನಾಟಕ ದೇವಾಲಯ ಕೋಶ : ಕೊಪ್ಪಳ ಜಿಲ್ಲೆ,** ೨೦೦೧, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕರ್ನಾಟಕ ದೇವಾಲಯ ಕೋಶ ಎಂಬುದು ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಮಹತ್ತರ ಯೋಜನೆ. ಕನ್ನಡ ನಾಡಿನ ಶಿಲ್ಪಕಲಾ ಪ್ರಪಂಚದ ಬಹುದೊಡ್ಡ ಆಸ್ತಿಯಾಗಿರುವ ದೇವಾಲಯಗಳು ನೈಸರ್ಗಿಕ ಆಘಾತ, ಸಾಮಾಜಿಕ ಉಪೇಕ್ಷೆಗಳಿಂದಾಗಿ ಶಿಥಿಲವಾಗುತ್ತಾ ಸಾಗಿವೆ. ಇವು ನಾಶವಾಗುವ ಮುನ್ನ ಈ ಕಲಾಕೃತಿಗಳನ್ನು ದಾಖಲಿಸಬೇಕೆಂಬ ಮಹತ್ವಾಕಾಂಕ್ಷೆಯ ಯೋಜನೆಯನ್ನು ವಿಭಾಗವು ಹಮ್ಮಿಕೊಂಡಿದೆ. ಅದರನ್ವಯ ಕರ್ನಾಟಕದ ಪ್ರಾಚೀನ ಸಂಸ್ಕೃತಿಯನ್ನು ಪ್ರತಿನಿಧಿಸುವ ದೇವಾಲಯಗಳನ್ನು ಒಂದೆಡೆ ತಂದು



PDF created with pdfFactory trial version www.pdffactory.com

ಸಂಶೋಧಕ ವಿದ್ವಾಂಸರಿಗೆ ಅಧ್ಯಯನಕ್ಕೆ ಅನುವು ಮಾಡಿಕೊಡುವ ಪ್ರಯತ್ನವಾಗಿದೆ. ಕರ್ನಾಟಕದಲ್ಲಿರುವ ಸ್ಮಾರಕಗಳ ದಾಖಲೀಕರಣದ ದೃಷ್ಟಿಯನ್ನಿಟ್ಟುಕೊಂಡು ಬೃಹತ್ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯ ಅಡಿಯಲ್ಲಿ ಪ್ರತಿ ಜಿಲ್ಲೆಯ ಗ್ರಾಮಗಳಲ್ಲಿರುವ ಪ್ರಾಚೀನ ಸ್ಮಾರಕಗಳನ್ನು ಕ್ಷೇತ್ರಕಾರ್ಯದ ಮೂಲಕ ದಾಖಲಿಸಿ ಗ್ರಂಥರೂಪದಲ್ಲಿ ಪ್ರಕಟಿಸುತ್ತ ಬಂದಿದೆ. ಈ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಪ್ರಾಚೀನ ದೇವಾಲಯಗಳನ್ನು ತಾಲೂಕುವಾರು ವಿಭಾಗಿಸಿ ಈ ಕೃತಿಯಲ್ಲಿ ವಿವರಗಳನ್ನು ನೀಡಲಾಗಿದೆ. ಇಲ್ಲಿ ಕಲೆ ಮತ್ತು ವಾಸ್ತುಶಿಲ್ಪವಲ್ಲದೆ ಶಾಸನ ಮತ್ತಿತರ ಆಕರಗಳ ಮೂಲಕ ಅಧಿಕೃತ ಮಾಹಿತಿಯನ್ನು ನೀಡಲಾಗಿದೆ.

**೧೩. ಪ್ರಗತಿಯಲ್ಲಿರುವ ಯೋಜನೆಗಳು :**

೧. **ಕರ್ನಾಟಕ ದೇವಾಲಯ ಕೋಶ: ಚಿತ್ರದುರ್ಗ ಜಿಲ್ಲೆ,** ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕರ್ನಾಟಕ ದೇವಾಲಯ ಕೋಶ ಎಂಬುದು ಪ್ರಾಚೀನ ಇತಿಹಾಸಮತ್ತು ಪುರಾತತ್ವ ಅಧ್ಯಯನ ವಿಭಾಗದ ಮಹತ್ತರ ಯೋಜನೆ. ಅದರನ್ವಯ ಕರ್ನಾಟಕದ ಪ್ರಾಚೀನ ಸಂಸ್ಕೃತಿಯನ್ನು ಪ್ರತಿನಿಧಿಸುವ ದೇವಾಲಯಗಳನ್ನು ಒಂದೆಡೆ ತಂದು ಸಂಶೋಧಕ ವಿದ್ವಾಂಸರಿಗೆ ಅಧ್ಯಯನಕ್ಕೆ ಅನುವು ಮಾಡಿಕೊಡುವ ಪ್ರಯತ್ನವಿದು. ಅದರಂತೆ ಚಿತ್ರದುರ್ಗ ಜಿಲ್ಲೆಯ ಪ್ರಾಚೀನ ದೇವಾಲಯಗಳನ್ನು ತಾಲೂಕುವಾರು ವಿಭಾಗಿಸಿ ಈ ಕೃತಿಯಲ್ಲಿ ವಿವರಗಳನ್ನು ನೀಡಲಾಗುವುದು. ಇಲ್ಲಿ ಕಲೆ ಮತ್ತು ವಾಸ್ತುಶಿಲ್ಪವಲ್ಲದೆ ಶಾಸನ ಮತ್ತಿತರ ಆಕರಗಳ ಮೂಲಕ ಅಧಿಕೃತ ಮಾಹಿತಿಯನ್ನು ನೀಡಲಾಗಿದೆ.

೨. **ವಿಜಯನಗರ ಕಾಲದ ಬಿರುದಾವಳಿಗಳು,** ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ

ವಿಜಯನಗರ ಸಾಮ್ರಾಜ್ಯದ ಮೇಲೆ ಸಾಕಷ್ಟು ಅಧ್ಯಯನಗಳು ನಡೆದಿದ್ದರೂ ಇನ್ನೂ ನಡೆಯಬೇಕಾದ ಅದೆಷ್ಟೋ ಸಂಗತಿಗಳಿವೆ. ಅವುಗಳಲ್ಲಿ ಅಂದಿನ ಅರಸರು, ಮಾಂಡಲಿಕರು, ವೀರಯೋಧರು, ದಾರ್ಶನಿಕ ಯತಿಗಳು ಮೊದಲಾದವರಿಗೆ ನೀಡಲಾದ ಬಿರುದಾವಳಿಗಳು ಅನನ್ಯವಾಗಿವೆ. ಈ ಬಿರುದಾವಳಿಗಳು ಅಂದಿನ ಚರಿತ್ರೆಯನ್ನು ಸಾರುವ ಮಹತ್ವದ ಆಕರಗಳೂ ಹೌದು. ವಿಜಯನಗರ ಕಾಲದ ಶಾಸನ, ಸಾಹಿತ್ಯ ಮೊದಲಾದ ಆಕರಗಳಲ್ಲಿ ಇವುಗಳ ಪರಾಕ್ರಮವನ್ನು ಕಾಣಬಹುದಾಗಿದೆ. ಈ ಬಿರುದಾವಳಿಗಳ ಅರ್ಥ, ಸ್ವರೂಪ, ಮಹತ್ವ ಹಾಗೂ ಅಂದಿನ ಸಮಯ ಸಂದರ್ಭಗಳನ್ನು ಒಳಹೊಕ್ಕು ನೋಡಿದಾಗ ಇವು ಪ್ರಾಚೀನರ ಬದುಕಿನ ಅವಿಭಾಜ್ಯ ಅಂಗಗಳೇನೋ ಎಂಬಂತೆ ಭಾಸವಾಗುತ್ತದೆ. ಇವು ಆಯಾಯ ವ್ಯಕ್ತಿಯ ಜೀವನ ಸಾಧನೆಗಳಾಗಿದ್ದು, ಅವರ ಸಾಧನೆಯ ಪ್ರತೀಕಗಳೂ ಆಗಿವೆ. ಇವು ಅಂದಿನ ಆಡಳಿತವನ್ನಷ್ಟೇ ಪ್ರತಿನಿಧಿಸುವುದಿಲ್ಲ. ಅಂದಿನ ಇಡೀ ಜೀವನದ ಸಾಧನೆಯಾಗಿ, ಆದರ್ಶಗಳಾಗಿ, ಪ್ರತಿಷೆವಿಯ ಸಂಕೇತಗಳಾಗಿ, ಶೌರ್ಯ-ಪರಾಕ್ರಮದ ಪ್ರತೀಕಗಳೂ ಆಗಿವೆ.

ವಿಜಯನಗರ ಕಾಲದ ಶಾಸನ, ಸಾಹಿತ್ಯಗಳಲ್ಲಿ ನೂರಾರು ಬಿರುದುಗಳು ಕಂಡುಬರುತ್ತವೆ. ಬಿರುದಾವಳಿಗಳು ಆಯಾಯ ಕಾಲದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವ ಮಹತ್ವದ ಆಕರಗಳಾಗಿದ್ದು, ಇವುಗಳ ಮೂಲಕ ವಿಜಯನಗರ ಚರಿತ್ರೆಯನ್ನು ಗಮನಿಸಿದಾಗ ಹೊಳೆಯುವ ನೋಟ ಅತ್ಯಂತ ಕುತೂಹಲದಾಯಕವೆಂಬುದು ಅಧ್ಯಯನದ ಅಭಿಲಾಷೆಯಾಗಿದೆ. ಈ ನಿಟ್ಟಿನಲ್ಲಿ ಅಂದಿನ ಎಲ್ಲ ಬಗೆಯ ಬಿರುದುಗಳನ್ನು ಅಧ್ಯಯನಕ್ಕೆ



PDF created with pdfFactory trial version www.pdffactory.com

ಒಳಪಡಿಸುವ ಮೂಲಕ ವಿಜಯನಗರ ಕಾಲದ ಸಾಂಸ್ಕೃತಿಕ ಬದುಕೊಂದನ್ನು ಕಟ್ಟಿಕೊಡುವ ಮಹದೋದ್ದೇಶ ಪ್ರಸ್ತುತ ಅಧ್ಯಯನದ್ದಾಗಿದೆ.

**೧೪. ಪ್ರಕಟಣೆಗಳು :**

**೧೪.೧. ವಿಶ್ವವಿದ್ಯಾಲಯದಿಂದ ಪ್ರಕಟಿತ ಕೃತಿಗಳು :**

೧. **ಹಂಪೆಯ ಬಜಾರುಗಳು,** ೧೯೯೭

ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪೆಯು ದಕ್ಷಿಣ ಭಾರತದ ಪ್ರಮುಖ ಪಟ್ಟಣ ಮತ್ತು ವ್ಯಾಪಾರ ಕೇಂದ್ರವಾಗಿದ್ದಿತು. ವಿಜಯನಗರ ಅರಸರು ಆರ್ಥಿಕ ಚಟುವಟಿಕೆಗಳನ್ನು ಅಪಾರವಾಗಿ ಪ್ರೋತ್ಸಾಹಿಸಿದ್ದರು. ಹಂಪೆಯ ಪ್ರಮುಖ ದೇವಾಲಯಗಳ ಮುಂಭಾಗದ ಸಾಲುಮಂಟಪಗಳು ವ್ಯಾಪಾರದ ತಾಣಗಳಾಗಿದ್ದವು. ಈ ಸಾಲುಮಂಟಪಗಳೇ ಹಂಪೆಯ ಬಜಾರುಗಳಾಗಿವೆ. ಇವು ಒಂದು ವಿಧದಲ್ಲಿ ವಿಜಯನಗರದ ಆರ್ಥಿಕ ಚಟುವಟಿಕೆಗಳನ್ನೂ ಸಾಮಾಜಿಕ, ಸಾಂಸ್ಕೃತಿಕ ಆಚರಣೆಗಳನ್ನೂ ಹಿಡಿತದಲ್ಲಿರಿಸಿಕೊಂಡಿದ್ದವೆನ್ನಬಹುದು. ಸಾಲುಮಂಟಪಗಳಿಂದ ಕೂಡಿದ ಸ್ಥಳವನ್ನು ಈ ಅಧ್ಯಯನದಲ್ಲಿ 'ಬಜಾರ್' ಎಂದು ಸಂಬೋಧಿಸಲಾಗಿದೆ. ಪ್ರಸ್ತುತ ಅಧ್ಯಯನದ ಇನ್ನೊಂದು ಉದ್ದೇಶವೇನೆಂದರೆ, ವಿಜಯನಗರದ ಬಗೆಗೆ ಇದುವರೆಗೆ ವಿಪುಲ ಸಂಶೋಧನೆ ನಡೆದು ಹಲವಾರು ಗ್ರಂಥಗಳು ಹೊರಬಂದಿದ್ದರೂ ಹಂಪೆಯ ಬಜಾರುಗಳು ಕುರಿತು ಪ್ರತ್ಯೇಕ ಅಧ್ಯಯನ ನಡೆದಿಲ್ಲ. ಈ ಹಿನ್ನೆಲೆಯಲ್ಲಿ, ಹಂಪಿಯ ಪ್ರಮುಖ ಬಜಾರುಗಳನ್ನು ಗುರುತಿಸಿ, ವಿಜಯನಗರದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅವು ನಿರ್ವಹಿಸಿದ ಪಾತ್ರವನ್ನು ಚಿತ್ರಿಸಲು ಪ್ರಯತ್ನಿಸಿದೆ; ಇದೊಂದು ಸ್ಥೂಲ ಚಿತ್ರವೆನ್ನಬಹುದು.

ಶಾಸನಗಳು ಈಚಿನ ಉತ್ಖನನ ವರದಿಗಳು, ದೇವಾಲಯಗಳು, ಕಟ್ಟಡಗಳು ಮತ್ತು ಸಾಲುಮಂಟಪಗಳು ಹಂಪೆಯ ಬಜಾರುಗಳನ್ನು ಅಭ್ಯಸಿಸಲು ನೆರವಾಗುವ ಅವಶ್ಯಕ ಪ್ರಾಕ್ತನ ಆಧಾರಗಳು. ಈ ಮೇಲಿನ ಮೂಲ ಆಕರಗಳನ್ನು ಆಧರಿಸಿದ ಸಂಶೋಧನ ಗ್ರಂಥಗಳು, ಪರಿಚಯಾತ್ಮಕ ಗ್ರಂಥಗಳು ಮುಂತಾದವನ್ನೂ ಇಲ್ಲಿ ಸಂದರ್ಭಾನುಸಾರ ಬಳಸಿಕೊಳ್ಳಲಾಗಿದೆ.

೨. **ಕರ್ನಾಟಕ ದೇವಾಲಯ ಕೋಶ : ಬಳ್ಳಾರಿ ಜಿಲ್ಲೆ,** ೧೯೯೯

ಕರ್ನಾಟಕ ದೇವಾಲಯ ಕೋಶ ಎಂಬುದು ಪ್ರಾಚೀನ ಇತಿಹಾಸಮತ್ತು ಪುರಾತತ್ವ ಅಧ್ಯಯನ ವಿಭಾಗದ ಮಹತ್ತರ ಯೋಜನೆ. ಕನ್ನಡ ನಾಡಿನ ಶಿಲ್ಪಕಲಾ ಪ್ರಪಂಚದ ಬಹುದೊಡ್ಡ ಆಸ್ತಿಯಾಗಿರುವ ದೇವಾಲಯಗಳು ನೈಸರ್ಗಿಕ ಆಘಾತ, ಸಾಮಾಜಿಕ ಉಪೇಕ್ಷೆಗಳಿಂದಾಗಿ ಶಿಥಿಲವಾಗುತ್ತಾ ಸಾಗಿವೆ. ಇವು ನಾಶವಾಗುವ ಮುನ್ನ ಈ ಕಲಾಕೃತಿಗಳನ್ನು ದಾಖಲಿಸಬೇಕೆಂಬ ಮಹತ್ವಾಕಾಂಕ್ಷೆಯ ಯೋಜನೆಯನ್ನು ವಿಭಾಗವು ಹಮ್ಮಿಕೊಂಡಿದೆ. ಅದರನ್ವಯ ಕರ್ನಾಟಕದ ಪ್ರಾಚೀನ ಸಂಸ್ಕೃತಿಯನ್ನು ಪ್ರತಿನಿಧಿಸುವ ದೇವಾಲಯಗಳನ್ನು ಒಂದೆಡೆ ತಂದು ಸಂಶೋಧಕ ವಿದ್ವಾಂಸರಿಗೆ ಅಧ್ಯಯನಕ್ಕೆ ಅನುವು ಮಾಡಿಕೊಡುವ ಪ್ರಯತ್ನವಾಗಿದೆ. ಅದರಂತೆ ಬಳ್ಳಾರಿ ಜಿಲ್ಲೆಯ ಪ್ರಾಚೀನ ದೇವಾಲಯಗಳನ್ನು ತಾಲೂಕುವಾರು ವಿಭಾಗಿಸಿ ಈ ಕೃತಿಯಲ್ಲಿ ವಿವರಗಳನ್ನು ನೀಡಲಾಗಿದೆ. ಇಲ್ಲಿ ಕಲೆ ಮತ್ತು ವಾಸ್ತುಶಿಲ್ಪವಲ್ಲದೆ ಶಾಸನ ಮತ್ತಿತರ ಆಕರಗಳ ಮೂಲಕ ಅಧಿಕೃತ ಮಾಹಿತಿಯನ್ನು ನೀಡಲಾಗಿದೆ.

೩. **ಕರ್ನಾಟಕ ದೇವಾಲಯ ಕೋಶ : ಕೊಪ್ಪಳ ಜಿಲ್ಲೆ,** ೨೦೦೧



PDF created with pdfFactory trial version www.pdffactory.com

ಕರ್ನಾಟಕ ದೇವಾಲಯ ಕೋಶ ಎಂಬುದು ಪ್ರಾಚೀನ ಇತಿಹಾಸಮತ್ತು ಪುರಾತತ್ವ ಅಧ್ಯಯನ ವಿಭಾಗದ ಮಹತ್ತರ ಯೋಜನೆ. ಕನ್ನಡ ನಾಡಿನ ಶಿಲ್ಪಕಲಾ ಪ್ರಪಂಚದ ಬಹುದೊಡ್ಡ ಆಸ್ತಿಯಾಗಿರುವ ದೇವಾಲಯಗಳು ನೈಸರ್ಗಿಕ ಆಘಾತ, ಸಾಮಾಜಿಕ ಉಪೇಕ್ಷೆಗಳಿಂದಾಗಿ ಶಿಥಿಲವಾಗುತ್ತಾ ಸಾಗಿವೆ. ಇವು ನಾಶವಾಗುವ ಮುನ್ನ ಈ ಕಲಾಕೃತಿಗಳನ್ನು ದಾಖಲಿಸಬೇಕೆಂಬ ಮಹತ್ವಾಕಾಂಕ್ಷೆಯ ಯೋಜನೆಯನ್ನು ವಿಭಾಗವು ಹಮ್ಮಿಕೊಂಡಿದೆ. ಅದರನ್ವಯ ಕರ್ನಾಟಕದ ಪ್ರಾಚೀನ ಸಂಸ್ಕೃತಿಯನ್ನು ಪ್ರತಿನಿಧಿಸುವ ದೇವಾಲಯಗಳನ್ನು ಒಂದೆಡೆ ತಂದು ಸಂಶೋಧಕ ವಿದ್ವಾಂಸರಿಗೆ ಅಧ್ಯಯನಕ್ಕೆ ಅನುವು ಮಾಡಿಕೊಡುವ ಪ್ರಯತ್ನವಾಗಿದೆ. ಅದರಂತೆ ಕೊಪ್ಪಳ ಜಿಲ್ಲೆಯ ಪ್ರಾಚೀನ ದೇವಾಲಯಗಳನ್ನು ತಾಲೂಕುವಾರು ವಿಭಾಗಿಸಿ ಈ ಕೃತಿಯಲ್ಲಿ ವಿವರಗಳನ್ನು ನೀಡಲಾಗಿದೆ. ಇಲ್ಲಿ ಕಲೆ ಮತ್ತು ವಾಸ್ತುಶಿಲ್ಪವಲ್ಲದೆ ಶಾಸನ ಮತ್ತಿತರ ಆಕರಗಳ ಮೂಲಕ ಅಧಿಕೃತ ಮಾಹಿತಿಯನ್ನು ನೀಡಲಾಗಿದೆ.

**೧೪.೨. ವೈಯಕ್ತಿಕ ಪ್ರಕಟಿತ ಕೃತಿಗಳು :**

೧. **ಜಟಂಗಿ ರಾಮೇಶ್ವರ : ಸಾಂಸ್ಕೃತಿಕ ದರ್ಶನ,** ಸುಮೇಧ ಪ್ರಕಾಶನ, ದೇವಸಮುದ್ರ, ೨೦೦೪

ಜಟಂಗಿ ರಾಮೇಶ್ವರ ಎಂಬುದು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಒಂದು ಪ್ರಸಿದ್ಧ ಪ್ರಾಚೀನ ಎಡೆಯಾಗಿದೆ. ಇದು ಶಿಲಾಯುಗ ಕಾಲದಿಂದಲೂ ಮಾನವನ ವಸತಿ ತಾಣವಾಗಿದೆ. ಇದಕ್ಕೆ ವರ್ಣಚಿತ್ರಗಳು, ಮಡಕೆಕುಡಿಕೆಗಳು ಕಾರಣವಾಗಿವೆ. ಶಿಲಾಯುಗವಲ್ಲದೆ ಮೌರ್ಯ ಕಾಲದ ಅಶೋಕನ ಶಿಲಾಶಾಸನವನ್ನು ಇಲ್ಲಿ ಕಾಣಬಹುದು. ಹಾಗೆಯೇ ನಂತರ ಕಾಲದ ಅನೇಕ ದೇವಾಲಯ, ಶಾಸನ ಮತ್ತಿತರ ಸ್ಮಾರಕಾವಶೇಷಗಳು ಇಲ್ಲಿವೆ. ಅವುಗಳನ್ನ ದಾಖಲಿಸುವುದರ ಜೊತೆಗೆ ಅವುಗಳ ಸಾಂಸ್ಕೃತಿಕ ಮಹತ್ವವನ್ನು ತಿಳಿಸುವ ಮಹತ್ವದ ಉದ್ದೇಶದಿಂದ ಈ ಕೃತಿಯನ್ನು ರಚಿಸಲಾಗಿದೆ.

೨. **ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ,** ಸಂಚಿಕೆ ಪ್ರಕಾಶನ, ಚಿತ್ರದುರ್ಗ, ೨೦೦೯

**'ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ'** ಎಂಬ ಶೀರ್ಷಿಕೆ ಹೊತ್ತ ಪ್ರಸ್ತುತ ಗ್ರಂಥವು ದಕ್ಷಿಣ ಭಾರತದ ಮಧ್ಯಯುಗೀನ ಚರಿತ್ರೆಯಲ್ಲಿ ಪರಿಣಾಮಕಾರಿ ಆಳ್ವಿಕೆ ನಡೆಸಿದ ಸಾಮ್ರಾಜ್ಯ ವಿಜಯನಗರವನ್ನು ಕುರಿತದ್ದು. ವಿಜಯನಗರ ಸಾಮ್ರಾಜ್ಯದ ಮೇಲೆ ನಡೆದಷ್ಟು ಅಧ್ಯಯನಗಳು ಮತ್ತಾವ ಅರಸುಮನೆತನದ ಮೇಲೂ ನಡೆದಿಲ್ಲವೆನ್ನಬಹುದು. ಈ ಸಾಮ್ರಾಜ್ಯದ ವಿವಿಧ ಮುಖಗಳನ್ನು ಪರಿಚಯಿಸುವ ಹತ್ತಾರು ಗ್ರಂಥಗಳು, ನೂರಾರು ಲೇಖನಗಳು ಹೊರಬಂದಿವೆ. ಆದರೂ ಇನ್ನೂ ಹಲವು ಮಜಲುಗಳು ಮರೆಯಾಗಿವೆಯೆಂದೇ ಹೇಳಬಹುದು

ಚರಿತ್ರೆಗೆ ನೆರವಾಗುವ ಎಲ್ಲ ಬಗೆಯ ಆಕರಗಳನ್ನು ಸಂದರ್ಭಾನುಸಾರ ಬಳಸಿಕೊಂಡು ಪ್ರಸ್ತುತ ಅಧ್ಯಯನವನ್ನು ಕಟ್ಟುವ ಪ್ರಯತ್ನ ಮಾಡಲಾಗಿದೆ. ಪ್ರಸ್ತುತ ಗ್ರಂಥವನ್ನು ಅಧ್ಯಯನದ ಅನುಕೂಲಕ್ಕಾಗಿ ಏಳು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ. ಈ ಅಧ್ಯಾಯಗಳಲ್ಲಿ ಉಪಶೀರ್ಷಿಕೆಗಳೂ ಇವೆ. ಇವುಗಳಲ್ಲಿ ಮೊದಲೆರಡು ಅಧ್ಯಾಯಗಳು ಪ್ರಸ್ತಾವನೆ, ಸೈನ್ಯ ಮತ್ತು ಯುದ್ಧದ ನೆಲೆ, ಸ್ವರೂಪಗಳನ್ನು ಪ್ರತಿನಿಧಿಸುವಂಥವು. ಸೈನ್ಯ ಮತ್ತು ಯುದ್ಧ ಕುರಿತ ವಿವಿಧ ವಿದ್ವಾಂಸರ ವ್ಯಾಖ್ಯಾನಗಳನ್ನು ಇವುಗಳಲ್ಲಿ ವಿವರಿಸಲಾಗಿದೆ.

ವಿಜಯನಗರ ಕಾಲದ ಸೈನ್ಯದಲ್ಲಿ ಅನುಸರಿಸಲಾಗಿದ್ದ ಪದ್ಧತಿ ಮತ್ತು ಕ್ರಮಗಳು, ಯುದ್ಧದಲ್ಲಿ ಬಳಕೆಗೊಂಡ ತಂತ್ರ ಹಾಗೂ ನೀತಿಗಳು, ಸಾಮ್ರಾಜ್ಯವು ದಕ್ಷಿಣ ಭಾರತದಾದ್ಯಂತ ವಿಸ್ತಾರವಾಗಿ ಬೆಳೆಯುವಲ್ಲಿ ಅಂದಿನ ಸೈನ್ಯದ ಪಾತ್ರ ಮತ್ತು ಮಹತ್ವಗಳು – ಇವೇ ಮುಂತಾದ ಅಂಶಗಳನ್ನು ಆಕರಗಳ ಹಿನ್ನೆಲೆಯಲ್ಲಿ



PDF created with pdfFactory trial version www.pdffactory.com

ಚರ್ಚಿಸುವುದರ ಜೊತೆಗೆ ಪರಿಣಾಮಗಳನ್ನು ಅರಿಯುವುದು ಕೂಡ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಮೂರನೆಯ ಅಧ್ಯಾಯವು ವಿಜಯನಗರ ಸೈನ್ಯ ವ್ಯವಸ್ಥೆಯನ್ನು ಕುರಿತದ್ದು. ಇಲ್ಲಿ ಪ್ರಾಕೃತಿಕ ಪರಿಸರ, ಸೇನಾಬಲ, ಸೈನಿಕ ವಿಭಾಗಗಳಾದ ಕಾಲ್ದಳ, ಅಶ್ವದಳ, ಗಜದಳ ಮತ್ತು ಫಿರಂಗಿದಳಗಳನ್ನು ವಿವಿಧ ಆಕರಗಳು ನೀಡುವ ಮಾಹಿತಿಗಳ ಹಿನ್ನೆಲೆಯಲ್ಲಿ ವಿಜಯನಗರ ಸೈನ್ಯದ ನೈಜ ಚಿತ್ರಣವನ್ನು ನೀಡುವಲ್ಲಿ ಯತ್ನಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಸೈನ್ಯದ ಆಡಳಿತಕ್ರಮವನ್ನು ಅಭ್ಯಸಿಸಲಾಗಿದೆ. ರಾಜ, ಮಹಾದಂಡನಾಯಕ, ದಂಡನಾಯಕರು ಕೇಂದ್ರದ ಆಡಳಿತದ ರೂವಾರಿಗಳಾದರೆ, ಅಮರನಾಯಕರು ರಾಜನ ಮನ್ನಣೆಯ ಮೇರೆಗೆ ಪ್ರಾಂತೀಯ ಆಡಳಿತದ ಸೂತ್ರಧಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. ಅಮರನಾಯಕ ವ್ಯವಸ್ಥೆಯು ವಿಜಯನಗರ ಆಡಳಿತ ಕ್ರಮದಲ್ಲಿ ಅನುಸರಿಸಿದ ವಿಶಿಷ್ಟ ಆಡಳಿತ ಘಟಕ. ಇವುಗಳಲ್ಲದೆ ಸೈನಿಕರ ಆಯ್ಕೆ, ವೇತನ, ತರಬೇತಿ ಮುಂತಾದವುಗಳನ್ನು ಈ ಅಧ್ಯಾಯ ಒಳಗೊಂಡಿದೆ. ಅಧ್ಯಯನದಲ್ಲಿ ಸೈನ್ಯ ಮತ್ತು ಯುದ್ಧ ವ್ಯವಸ್ಥೆಗಳು ಪ್ರತ್ಯೇಕವಾಗಿದ್ದು, ಯುದ್ಧವ್ಯವಸ್ಥೆ ಮತ್ತು ಯುದ್ಧೋಪಕರಣಗಳನ್ನು ಐದನೆಯ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಯುದ್ಧವ್ಯವಸ್ಥೆಯು ಯುದ್ಧಕ್ಕೆ ಮುನ್ನ ನಡೆಯುತ್ತಿದ್ದ ಸಿದ್ಧತೆ, ಆಚರಣೆಗಳು, ಸೇನಾ ಶಿಬಿರ, ಯುದ್ಧ ಸ್ಥಿತಿ, ಯುದ್ಧದ ಬಗೆಗಳಾದ ಬಯಲು ಯುದ್ಧ, ಕೋಟೆಕಾಳಗ ಮತ್ತು ನೌಕಾಯುದ್ಧಗಳು, ಹೋರಾಟದ ತಂತ್ರಗಳು, ಯುದ್ಧಾನಂತರದ ಸಾವುನೋವುಗಳು, ಲೂಟಿ–ದಾಳಿಗಳು, ಯುದ್ಧ ಪ್ರೇರಣೆ ಮತ್ತು ಬಿರುದಾವಳಿಗಳನ್ನು ಒಳಗೊಂಡಿದೆ. ಯುದ್ಧೋಪಕರಣ ಉಪವಿಭಾಗದಲ್ಲಿ ವಿಜಯನಗರ ಕಾಲದಲ್ಲಿ ಬಳಸುತ್ತಿದ್ದ ಆಯುಧೋಪಕರಣಗಳು, ರಕ್ಷಣಾ ಪರಿಕರಗಳನ್ನು ಚರ್ಚಿಸಲಾಗಿದೆ.

ಯುದ್ಧಕ್ಕೆ ಮುನ್ನ, ಯುದ್ಧ ನಡೆಯುವಾಗ, ಯುದ್ಧನಂತರ ಎರಡೂ ಕಡೆಯ ಪಕ್ಷಗಳು ಅಳವಡಿಸಿಕೊಂಡಿದ್ದ ಕೆಲವು ಕ್ರಮಗಳಿದ್ದವು. ಅವೇ ಯುದ್ಧ ನೀತಿಗಳು. ಯುದ್ಧವನ್ನು ಆರಂಭಿಸುವ, ನಿಲ್ಲಿಸುವ ವಿಧಿ–ವಿಧಾನಗಳು, ಯುದ್ಧದಲ್ಲಿ ಯಾರೊಂದಿಗೆ ಹೋರಾಡಬೇಕು–ಹೋರಾಡಬಾರದು, ಸತ್ತ ಯೋಧರನ್ನು ಕಾಣಬೇಕಾದ ರೀತಿ, ಯುದ್ಧಾನಂತರದಲ್ಲಿ ಸೋತ ಸೇನೆಯನ್ನು ನಡೆಸಿಕೊಳ್ಳಬೇಕಾದ ಕ್ರಮ – ಇವೇ ಮೊದಲಾದವುಗಳು ಯುದ್ಧ ನಿಯಮಗಳಾಗಿದ್ದವು. ಇವುಗಳಲ್ಲದೆ ಯುದ್ಧದ ಪರಿಣಾಮಗಳು ಒಂದು ಸಾಮ್ರಾಜ್ಯದ ಅಭಿವೃದ್ಧಿ ಅಥವಾ ಅವನತಿಗೆ ಹೇಗೆ ಕಾರಣವಾದುವೆಂಬ ಅಂಶಗಳನ್ನು ಆರನೆಯ ಅಧ್ಯಾಯವು ಒಳಗೊಂಡಿರುವುದು. ಏಳನೆಯ ಅಧ್ಯಾಯವು ಪ್ರಸ್ತುತ ಅಧ್ಯಯನದ ಸಂಕ್ಷಿಪ್ತ ರೂಪವೆನ್ನಬಹುದು. ಹೀಗೆ ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿಯನ್ನು ಇದುವರೆಗೆ ದೊರೆತ ಆಕರಗಳ ಹಿನ್ನೆಲೆಯಲ್ಲಿ ಸಿದ್ಧಪಡಿಸಲಾಗಿದೆ.

**೧೪.೩. ಸಂಪಾದಿತ ಕೃತಿಗಳು :**

೧. **Panchatrantra (Recent Researches in Indian Archaeology), Dr.C.S. Patil Commemoration Volume, Bharatiya Kala Prakashan, New Delhi, 2006**

ಈ ಕೃತಿಯು ಕರ್ನಾಟಕದ ಪ್ರಾಚ್ಯವಸ್ತಿ ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದಲ್ಲಿ ಉಪನಿರ್ದೇಶಕರಾಗಿ ಸೇವೆ ಸಲ್ಲಿಸಿ ವೃತ್ತಿಯಲ್ಲಿರರುವಾಗಲೇ ಇಹಲೋಕ ತ್ಯಜಿಸಿದ ಡಾ.ಸಿ.ಎಸ್. ಪಾಟೀಲ್ ಅವರ ನೆನಪಿಗಾಗಿ ಹೊರತಂದ ಸಂಪಾದನ ಗ್ರಂಥ. ಇಲ್ಲಿ ಭಾರತೀಯ ಚರಿತ್ರೆ, ಕಲೆ, ವಾಸ್ತುಶಿಲ್ಪ, ಉತ್ಖನನ ಮೊದಲಾದ ಸಂಗತಿಗಳನ್ನು ಒಳಗೊಂಡ ಸಂಶೋಧನ ಪ್ರಬಂಧಗಳನ್ನು ದೇಶದ ಪ್ರಸಿದ್ಧ ವಿದ್ವಾಂಸರಿಂದ



PDF created with pdfFactory trial version www.pdffactory.com

ಸಂಗ್ರಹಿಸಿ ಸಂಪಾದಿಸಲಾಗಿದೆ. ಎರಡು ಸಂಪುಟಗಲ್ಲಿ ಇರುವ ಈ ಕೃತಿ ಅತ್ಯಂತ ಮಹತ್ವದ ಸಂಶೋಧನ ಗ್ರಂಥವಾಗಿದೆ.

೨. **ಕುವೆಂಪು ವಿಚಾರಧಾರೆಯ ಪ್ರಸ್ತುತತೆ**(ಸಂಪಾದನೆ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

ಈ ಕೃತಿಯು ೨೦೦೩ರಲ್ಲಿ ಕುವೆಂಪು ಅವರ ಜನ್ಮಸ್ಥಳವಾದ ಕುಪ್ಪಳ್ಳಿಯಲ್ಲಿ ನಡೆಸಲಾದ ಕುವೆಂಪು ವಿಚಾರಧಾರೆಯ ಪ್ರಸ್ತುತತೆ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳ ಸಂಪಾದನಾ ಕೃತಿಯಾಗಿದೆ. ಇಲ್ಲಿ ಕುವೆಂಪು ಅವರ ಸಾಹಿತ್ಯದಲ್ಲಿ ಇರುವ ಸಂಗತಿಗಳಾದ ಪರಿಸರ, ಆರ್ಥಿಕ, ಧಾರ್ಮಿಕ, ಸಾಮಾಜಿಕ ಹಾಗೂ ವೈಚಾರಿಕ ವಿಚಾರಗಳನ್ನು ಕುರಿತ ಪ್ರಬಂಧಗಳಿವೆ.

**೧೩. ಪ್ರಕಟಿತ ಪ್ರಮುಖ ಲೇಖನಗಳು**

೧. **ವಿಜಯನಗರ ಕಾಲದ ನೌಕಾಯುದ್ಧ**, ವಿಜಯನಗರ ಅಧ್ಯಯನ–೯, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೪

ನೌಕಾಪಡೆಯು ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದುದು ಪುರಾತತ್ವ ಹಾಗೂ ಸಾಹಿತ್ಯ ಆಕರಗಳಿಂದ ವ್ಯಕ್ತಗೊಳ್ಳುತ್ತದೆ. ವಿಜಯನಗರವು ಆರಂಭದ ಅರಸರಿಂದ ಹಿಡಿದು ಸದಾಶಿವರಾಯನವರೆಗೆ ಶ್ರೀಲಂಕಾ ಮತ್ತಿತರ ದ್ವೀಪಗಳ ಮೇಲೆ ಹಡಗುಗಳ ಮೂಲಕ ಸೇನೆಯನ್ನು ಕೊಂಡೊಯ್ದು ನೌಕಾಯುದ್ಧಗಳನ್ನು ಕೈಗೊಂಡಿದ್ದರು; ಹಾಗೂ ಅವರು ಕೈಗೊಂಡ ಯುದ್ಧಗಳಲ್ಲಿ ಜಯಗಳಿಸಿ ಕೊನೆಯವರೆಗೂ ದ್ವೀಪಗಳ ಮೇಲೆ ತಮ್ಮ ಹಿಡಿತ ಸಾಧಿಸಿದ್ದರೆಂಬುದು ಸ್ಪಷ್ಟವಾಗುತ್ತದೆ. ಒಟ್ಟಿನಲ್ಲಿ ವಿಜಯನಗರವು ಆರಂಭದ ಅರಸರಿಂದ ಹಿಡಿದು ಸದಾಶಿವರಾಯನವರೆಗೆ ಶ್ರೀಲಂಕಾ ಮತ್ತಿತರ ದ್ವೀಪಗಳ ಮೇಲೆ ಹಡಗುಗಳ ಮೂಲಕ ಸೇನೆಯನ್ನು ಕೊಂಡೊಯ್ದು ನೌಕಾಯುದ್ಧಗಳನ್ನು ಕೈಗೊಂಡಿದ್ದರು; ಹಾಗೂ ಅವರು ಕೈಗೊಂಡ ಯುದ್ಧಗಳಲ್ಲಿ ಜಯಗಳಿಸಿ ಕೊನೆಯವರೆಗೂ ದ್ವೀಪಗಳ ಮೇಲೆ ತಮ್ಮ ಹಿಡಿತ ಸಾಧಿಸಿದ್ದರೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

೨. **ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳು** ದುರ್ಗದ ಸಿರಿ–೨೦೦೬, ಚಿತ್ರದುರ್ಗ ಜಿಲ್ಲಾ ಉತ್ಸವ ಸ್ಮರಣ ಸಂಚಿಕೆ, ೨೦೦೬

ಚಿತ್ರದುರ್ಗ ಜಿಲ್ಲೆಯು ಪ್ರಾಚೀನ ಕಾಲದಿಂದಲೂ ಮಾನವನ ಪ್ರಸಿದ್ಧ ನೆಲೆಯಾಗಿದೆ. ಕರ್ನಾಟಕದ ಪ್ರಾಚೀನ ಚರಿತ್ರೆಯನ್ನು ಮೊಟ್ಟಮೊದಲು ವೈಜ್ಞಾನಿಕ ದೃಷ್ಟಿಕೋನದಿಂದ ನೋಡಲು ಆರಂಭವಾದದ್ದೇ ಇಲ್ಲಿ ನಡೆದ ಉತ್ಖನನಗಳಿಂದ ಎಂಬುದು ಗಮನಾರ್ಹ. ಜಿಲ್ಲೆಯ ಚಂದ್ರವಳ್ಳಿ(೧೯೨೮, ೪೭) ಮತ್ತು ಬ್ರಹ್ಮಗಿರಿ (೧೯೪೦,೪೭)ಗಳ ಉತ್ಖನನಗಳಿಂದ ಚಿತ್ರದುರ್ಗ ಜಿಲ್ಲೆಯು ಚಾರಿತ್ರಿಕವಷ್ಟೇ ಅಲ್ಲದೆ ಪ್ರಾಕ್ಚಾರಿತ್ರಿಕವಾಗಿಯೂ ಅತ್ಯಂತ ಪ್ರಮುಖ ತಾಣವಾಗಿದ್ದುದು ಸ್ಪಷ್ಟವಾಯಿತು. ಭಾರತದ ಪ್ರಸಿದ್ಧ ಶಾಂತಿಪ್ರಿಯ ಅರಸ ಮೌರ್ಯ ಸಾಮ್ರಾಟ ಅಶೋಕನ ಆಳ್ವಿಕೆಯು ದಕ್ಷಿಣ ಭಾರತದಲ್ಲಿ ಹರಡಿತ್ತೆಂಬುದು ತಿಳಿದುಬಂದದ್ದು ಜಿಲ್ಲೆಯ ಸಿದ್ದಾಪುರ, ಬ್ರಹ್ಮಗಿರಿ ಮತ್ತು ಜಟಂಗಿ ರಾಮೇಶ್ವರಗಳಲ್ಲಿ ಕಂಡುಬಂದ ಬಂಡೆಗಲ್ಲು ಶಾಸನಗಳಿಂದ ಎಂಬುದು ತಿಳಿದ ಸಂಗತಿ. ಅಂತೆಯೇ ಚಂದ್ರವಳ್ಳಿ ಉತ್ಖನನದಲ್ಲಿ ದೊರೆತ ರೋಮನ್ ನಾಣ್ಯಗಳಿಂದ ಪ್ರಾಚೀನ ಭಾರತೀಯರು ವಿದೇಶಗಳೊಂದಿಗೆ ಉತ್ತಮ ವ್ಯಾಪರ ಸಂಬಂಧವನ್ನು ಹೊಂದಿದ್ದರೆಂಬುದು ದೃಢಪಟ್ಟಿತು. ಜಿಲ್ಲೆಯ ಚಿತ್ರದುರ್ಗ, ಮೊಳಕಾಲ್ಮೂರು ಮತ್ತು ಬ್ರಹ್ಮಗಿರಿ ಮೊದಲಾದ ಕೋಟೆಗಳ ರಚನಾ ವಿನ್ಯಾಸ ಮತ್ತು ಬಳಸಿದ ತಂತ್ರಜ್ಞಾನಗಳು ಆಧುನಿಕ ತಂತ್ರಜ್ಞರನ್ನು ಬೆರಗುಗೊಳಿಸಿವೆ. ಇಲ್ಲಿನ ಕೋಟೆಕೊತ್ತಲಗಳಲ್ಲದೆ ದೇವಾಲಯ,



PDF created with pdfFactory trial version www.pdffactory.com

ಶಾಸನ, ಕಲೆ ಮತ್ತು ವಾಸ್ತುಶಿಲ್ಪ ಮೊದಲಾದ ಆಕರಗಳು ಸಂಸ್ಕೃತಿಪ್ರಿಯರನ್ನು ಬಡಿದೆಬ್ಬಿವಂತಿವೆ. ಚಿತ್ರದುರ್ಗ ಜಿಲ್ಲಾ ಭೌಗೋಳಿಕ ಪರಿಸರವು ಸಮುದ್ರ ಮಟ್ಟದಿಂದ ೬೦೦ ರಿಂದ ೯೦೦ ಅಡಿಗಳಷ್ಟು ಎತ್ತರದಲ್ಲಿದ್ದು ಉತ್ತಮ ಹವಾಮಾನವನ್ನು ಹೊಂದಿದ ಪ್ರದೇಶವಾಗಿದೆ. ಈ ಜಿಲ್ಲೆಯ ಕಣಶಿಲೆಯ ಬೃಹತ್ ಶಿಲಾಸ್ತೋಮ ಹಾಗೂ ಖನಿಜದ ಅದಿರುಗಳನ್ನು ಒಳಗೊಂಡ ಬೆಟ್ಟಶ್ರೇಣಿಗಳು, ವಾಸಯೋಗ್ಯ ಗುಹೆಗಳು, ನದಿ, ಹಳ್ಳಕೊಳ್ಳಗಳ ಬಯಲು, ಮರಗಿಡಗಳನ್ನು ಒಳಗೊಂಡ ಈ ಪರಸರವು ಕರ್ನಾಟಕದ ಇತರೆಡೆಗಳಂತೆ ಪ್ರಾಚೀನ ಮಾನವ ನೆಲೆಗೊಳ್ಳಲು ಹಿತಕರವಾಗಿದ್ದಿತು.

೩. **ಯುದ್ಧಕಲೆ,** ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

ಯುದ್ಧಕಲೆಯು ಆಂಗ್ಲಭಾಷೆಯ 'ಅಡಿಣ ಅಜಿ ತಿಚಿಡಿ'ಗೆ ಸಂವಾದಿಯಾಗಿ ಬಳಕೆಗೊಂಡಿದೆ. ಯುದ್ಧವು ತಂತ್ರಜ್ಞಾನ, ಶಸ್ತ್ರಾಸ್ತ್ರ ತಯಾರಿಕೆ, ಯೋಜನೆ, ರೂಪುರೇಷೆ ಮುಂತಾದ ವ್ಯವಸ್ಥಿತ ವಿಧಿವಿಧಾನಗಳಿಂದ ವಿಜ್ಞಾನವಾಗಿದ್ದರೆ ಆಯುಧ ಬಳಕೆ, ಯುದ್ಧ ಕೌಶಲ, ಯುಕ್ತಿ, ಪ್ರಾಣಿಗಳನ್ನು ಹೋರಾಟಕ್ಕೆ ಅಣಿಗೊಳಿಸುವ ರೀತಿ, ಹೋರಾಟ, ವ್ಯೂಹ, ಕೋಟೆಯ ರಚನಾ ಶೈಲಿ, ಕೋಟೆಕಾಳಗ, ಯುದ್ಧಕ್ಕೆ ಸೈನಿಕರನ್ನು ಪ್ರೇರೇಪಿಸುವ ಬಗೆ ಮೊದಲಾದವು ಕಲೆಯೆಂಬುದನ್ನು ಸಮರ್ಥಿಸುತ್ತವೆ. ಯುದ್ಧವು ಒಂದು ಬಗೆಯ ಕಲೆ. ಅದಕ್ಕೆ ವಿಶೇಷ ಬಗೆಯ ಶಿಕ್ಷಣವು ಅಗತ್ಯವಾಗಿದೆ. ಯುದ್ಧಕಲೆಯು ಬರಿಯ ಆಯುಧೋಪಕರಣಗಳನ್ನು ಮಾತ್ರ ಹೊಂದಿರುವುದಿಲ್ಲ. ಆಯುಧ ಬಳವುವ ಕಲೆಯನ್ನೂ ಅದು ಒಳಗೊಂಡಿರುತ್ತದೆ. ಅಂತೆಯೇ ಯುದ್ಧವಿದ್ಯೆಯು ಪ್ರಾಚೀನ ಕಾಲದಲ್ಲಿ ಅನಿವಾರ್ಯವಾಗಿ ಬಳಕೆಯಲ್ಲಿದ್ದಿತು.

೪. **ವಿಜಯನಗರ ಕಾಲದ ದಂಡನಾಯಕರು** ಚರಿತ್ರೆ ಅಧ್ಯಯನ, ಸಂಪುಟ ೪, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧

ವಿಜಯನಗರ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ದಂಡನಾಯಕರ ಪಾತ್ರ ಬಹು ಮುಖ್ಯವಾಗಿದ್ದಿತು. ಅದರಲ್ಲೂ ಸೇನಾ ಸಂಘಟನೆಯಲ್ಲಿ ರಾಜನಷ್ಟೇ ಮುಖ್ಯ ಪಾತ್ರ ದಂಡನಾಯಕನದು. ವಿಜಯನಗರ ಕಾಲದಲ್ಲಿ ದಂಡನಾಯಕರು ಸೈನ್ಯದ ಮುಖ್ಯಸ್ಥ ಮಾತ್ರವಲ್ಲದೆ ರಾಜ್ಯದ ಮಹಾಪ್ರಧಾನ ಹುದ್ದೆಯನ್ನೂ ಅಲಂಕರಿಸಿದ್ದುದನ್ನು ಕಾಣಬಹುದು. ಆದುದರಿಂದ ದಂಡನಾಯಕ ಮಹಾಪ್ರಧಾನನಾಗಿ ಮಂತ್ರಿಮಂಡಲದ ಸದಸ್ಯನಾಗಿಯೂ, ಸೈನ್ಯವ್ಯವಸ್ಥೆಯ ಮುಖಂಡನಾಗಿಯೂ ಕಾರ್ಯ ನಿರ್ವಹಿಸುತ್ತಿದ್ದನು. ಅರಸನ ಗೈರು ಹಾಜರಿಯಲ್ಲಿ ಸೈನ್ಯವನ್ನು ಸ್ವತಃ ಮುನ್ನಡೆಸುತ್ತಿದ್ದನು. ಪ್ರೌಢದೇವರಾಯನ ಕಾಲದಲ್ಲಿ ಲಕ್ಕಣ್ಣದಣ್ಣಾಯಕ ದಕ್ಷಿಣದ ದಂಡಯಾತ್ರೆಯಲ್ಲಿ ಜಯಿಸಿ ಸಿಲೋನ್‌ವರೆಗೆ ದಿಗ್ವಿಜಯ ಕೈಗೊಂಡಿದ್ದುದನ್ನು ನೆನಪಿಸಿಕೊಳ್ಳಬಹುದು. ಹಾಗೆಯೇ ಬುಕ್ಕರಾಯನ ಕಾಲದಲ್ಲಿ ಮುದ್ದಪ್ಪ ದಣ್ಣಾಯಕ, ಕೃಷ್ಣದೇವರಾಯನ ಅವಧಿಯಲ್ಲಿ ತಿಮ್ಮಣ್ಣನಾಯಕ(ತಿಮ್ಮರಸ)ರ ಸಾಧನೆಗಳು ಮಹತ್ವದವು.ವಿಜಯನಗರ ಕಾಲದಲ್ಲಿ ಸೈನಿಕ ವಿಭಾಗವನ್ನು ಕಂದಾಚಾರವೆಂದು ಹೆಸರಿಸಲಾಗಿದ್ದಿತು. ಇದರ ಮುಖ್ಯಸ್ಥನನ್ನು ಕಂದಾಚಾರನಾಯಕ ಹಾಗೂ ಮಹಾದಂಡನಾಯಕನೆಂದು ಕರೆಯುತ್ತಿದ್ದರು. ಮಹಾಪ್ರಧಾನ ಅಥವಾ ದಂಡನಾಯಕನಿಗೆ ದಣ್ಣಾಯಕ, ದಳವಾಯಿ, ದಳನಾಯಕ, ಸೇನಾಧಿಪತಿ, ಸರ್ವ ಸೈನ್ಯಾಧಿಕಾರಿ ಇನ್ನೂ ಮುಂತಾದ ಹೆಸರುಗಳಿಂದ ಕರೆಯಲಾಗಿದೆ.

ಮಹಾ ದಂಡನಾಯಕರು, ದಂಡನಾಯಕರು ಸೈನ್ಯಾಡಳಿತ, ರಾಜ್ಯಾಡಳಿತವನ್ನು ನೋಡಿಕೊಳ್ಳುವುದರೊಂದಿಗೆ ಸಾಮ್ರಾಜ್ಯವನ್ನು ವಿಸ್ತರಿಸುವ, ರಕ್ಷಿಸುವ ಕಾರ್ಯದಲ್ಲೂ ತೊಡಗಿದ್ದರು.



PDF created with pdfFactory trial version www.pdffactory.com

ಆಡಳಿತದಲ್ಲಿ ಸುಧಾರಣೆಗಳನ್ನು ತರುವುದರೊಂದಿಗೆ ಕೆರೆ–ಕಟ್ಟೆ–ಕಾಲುವೆಗಳನ್ನು ತೋಡಿಸುವ, ದೇವಾಲಯ, ಮಠಮಾನ್ಯಗಳನ್ನು ಕಟ್ಟಿಸುವ ಮೂಲಕ ಸಾಮಾಜಿಕವಾಗಿ ಮತ್ತು ಧಾರ್ಮಿಕ ಸೇವಾಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದುದು ಶ್ಲಾಘನೀಯ. ಒಟ್ಟಿನಲ್ಲಿ ದಂಡನಾಯಕರು ಮಹಾದಂಡನಾಯಕ, ಸರ್ವಸೈನ್ಯಾಧಿಕಾರಿ, ಕಂದಾಚಾರನಾಯಕ ಹಾಗೂ ಪ್ರಧಾನಮಂತ್ರಿಯಾಗಿ ವಿಜಯನಗರ ಕಾಲದಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದುದನ್ನು ಕಾಣಬಹುದು.

೬. **ಚಿತ್ರದುರ್ಗ ತಾಲೂಕಿನ ಚಿಪ್ಪಿನಕೆರೆಯಲ್ಲಿ ಕಂಡುಬಂದಿರುವ ಪ್ರಾಕ್ಚಾರಿತ್ರಿಕ ಕುರುಹುಗಳು,** ಇತಿಹಾಸ ದರ್ಶನ–೧೧, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೬

೭. **ಹಂಪಿಯ ಪಾನ್‌ಸುಪಾರಿ ಬಜಾರು** ಹಂಪಿಯ ಪರಂಪರೆ, ಹೊಸಪೇಟೆ, ೧೯೯೬

೯. **ಆಕನೂರಿನಲ್ಲಿ ಕಂಡುಬಂದಿರುವ ಆದಿ ಇತಿಹಾಸ ಕಾಲದ ನೆಲೆ** ಇತಿಹಾಸ ದರ್ಶನ –೧೨, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೭

೧೦. **ಬೊಬ್ಬಿಲಿ ನಾಗಿರೆಡ್ಡಿ – ಕಾವ್ಯ ಮತ್ತು ವಿಶ್ಲೇಷಣೆ** ಕನ್ನಡ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೧೧. **ಕೂಡ್ಲಿಗಿ ತಾಲೂಕಿನ ವೀರನದುರ್ಗದ ಕೋಟೆ** ಇತಿಹಾಸ ದರ್ಶನ–೧೪, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೯

೧೨. **ಶೌರ್ಯ ಪರಾಕ್ರಮಗಳನ್ನು ಪ್ರತಿಬಿಂಬಿಸುವಲ್ಲಿ ವಿಜಯನಗರ ಕಾಲದ ಬಿರುದಾವಳಿಗಳು,** ವಿಜಯನಗರ ಅಧ್ಯಯನ–೪, ಹಂಪಿ ಉತ್ಸವ ಸಂಚಿಕೆ, ಮೈಸೂರು, ೨೦೦೦

೧೩. **ವಿಜಯನಗರ ಕಾಲದ ವೀರಶೈವ ಧರ್ಮ,** ವೀರಶೈವ ಸ್ಮರಣ ಸಂಚಿಕೆ, ಹೊಸಪೇಟೆ, ೧೯೮೮

೧೪. **Achyuta bazaar at Hampi (Hemakuta)**, C.T.M.Kotraiah Felicitation Volume, New Delhi, ೨೦೦೧

೧೫. **ವಿಜಯನಗರ (ಹಂಪೆ) ನಗರ ರಚನೆ,** ವಿಜಯನಗರದ ಸಾಂಸ್ಕೃತಿಕ ಆಯಾಮಗಳು, ಹೊಸಪೇಟೆ, ೧೯೯೭

೧೬. **ವಿಜಯನಗರ ಅಧ್ಯಯನಗಳು,** ಕನ್ನಡ ಅಧ್ಯಯನ, ಬಿಸಿಲು ಸಂಚಿಕೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೧೭.**ವಿಜಯನಗರ ಕಾಲದ ರಾಯಭಾರತ್ವ,** ವಿಜಯನಗರ ಅಧ್ಯಯನ–೭, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೩

೧೮. **ವಿಜಯನಗರ ಕಾಲದಲ್ಲಿ ಯುದ್ಧಪ್ರೇರಣೆ,** ವಿಜಯನಗರ ಅಧ್ಯಯನ–೮, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೩

೧೯. **ವಿಜಯನಗರ ಕಾಲದಲ್ಲಿ ಸಿಡಿಮದ್ದಿನ ಬಳಕೆ** ವಿಜಯನಗರ ಅಧ್ಯಯನ ವಿಚಾರ ಸಂಕಿರಣ, ಹಂಪಿ ಉತ್ಸವ, ಪ್ರಾ. ಮತ್ತು ಸಂ.ನಿರ್ದೇಶನಾಲಯ, ಮೈಸೂರು, ೨೦೦೬

೨೦. **ಪ್ರಾಚೀನ ಕಾಲದ ಕಲೆ ಮತ್ತು ವಾಸ್ತುಶಿಲ್ಪದ ತವರೂರು ಇಸಾಮುದ್ರ** ವಿಶಾಲ ಚಿತ್ರದುರ್ಗ, ತ್ರೈಮಾಸಿಕ ಪತ್ರಿಕೆ, ಚಿತ್ರದುರ್ಗ, ೨೦೦೬

೨೧. **ಹಾನಗಲ್ಲು ಪರಿಸರದ ವ್ಯಾಪಾರ ಮತ್ತು ವಾಣಿಜ್ಯ** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮



PDF created with pdfFactory trial version www.pdffactory.com

೨೨. ಕೋಗಳಿ ಶಾಸನಗಳು ಒಂದು ಸಮೀಕ್ಷೆ ಕೋಗಳಿನಾಡು ಶಾಲಾ ಶತಮಾನೋತ್ಸವ ಸ್ಮರಣ ಸಂಚಿಕೆ, ಕೋಗಳಿ, ೨೦೦೯

೧೬. ಭಾಗವಹಿಸಿದ ಕಾರ್ಯಾಗಾರ, ಉಪನ್ಯಾಸ, ವಿಚಾರ ಸಂಕಿರಣಗಳು

| ಕ್ರ. ಸಂ. | ಭಾಗವಹಿಸಿದ ಕಾರ್ಯಾಗಾರ, ವಿಚಾರ ಸಂಕಿರಣ, ಉಪನ್ಯಾಸ, ಸಮ್ಮೇಳನಗಳು | ಆಯೋಜಿಸಿದವರು | ವರ್ಷ | ಲೇಖನದ ಶೀರ್ಷಿಕೆ | ರಾಷ್ಟ್ರೀಯ/ ಅಂತಾರಾಷ್ಟ್ರೀಯ |
|---|---|---|---|---|---|
| 1 | ೧೧ನೇ ಕರ್ನಾಟಕ ಇತಿಹಾಸ ಅಕಾಡೆಮಿ ಸಮ್ಮೇಳನ, ಬೆಳಗಾವಿ | ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು | 1996 | ಚಿತ್ರದುರ್ಗ ತಾಲೂಕಿನ ಚಿಪ್ಪಿನಕೆರೆಯಲ್ಲಿ ಕಂಡುಬಂದಿರುವ ಪ್ರಾಕ್ಚಾರಿತ್ರಿಕ ಕುರುಹುಗಳು | ರಾಷ್ಟ್ರೀಯ |
| 2. | ವಿಜಯನಗರ ಇತಿಹಾಸ ವಿಚಾರಗೋಷ್ಠಿ ಹಂಪಿ | ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು | 1996 | ಹಂಪಿಯ ಪಾನ್‌ಸುಪಾರಿ ಬಜಾರು | ರಾಷ್ಟ್ರೀಯ |
| 3 | ಕರ್ನಾಟಕ ಇತಿಹಾಸ ಕಾಂಗ್ರೆಸ್ ಅಧಿವೇಶನ | ಕನ್ನಡ ವಿಶ್ವವಿದ್ಯಾಲಯ, ಹಂಪಿ | 1996 | ವಿಜಯನಗರ ಕಾಲದ ಅಚ್ಯುತಾಪೇಟೆ | ರಾಷ್ಟ್ರೀಯ |
| 4 | ವಿಜಯನಗರ ಸಾಂಸ್ಕೃತಿಕ ಆಯಾಮಗಳು | ಹೊಸಪೇಟೆ ಶ್ರೀ ವಿದ್ಯಾ ವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್,ಆನೆಗೊಂದಿ | 11.03.1996 | ವಿಜಯನಗರ ನಗರ ರಚನೆ | ರಾಷ್ಟ್ರೀಯ |
| 5 | ೧೨ನೇ ಕರ್ನಾಟಕ ಇತಿಹಾಸ ಅಕಾಡೆಮಿ ಸಮ್ಮೇಳನ, ಧಾರವಾಡ | ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು | 07.06.1997 | ಆಕನೂರಿನಲ್ಲಿ ಕಂಡುಬಂದಿರುವ ಆದಿ ಇತಿಹಾಸ ಕಾಲದ ನೆಲೆ | ರಾಷ್ಟ್ರೀಯ |
| 6 | ೧೨ನೇ ಕರ್ನಾಟಕ ಇತಿಹಾಸ ಅಕಾಡೆಮಿ ಸಮ್ಮೇಳನ, | ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು | 14.11.1999 | ಕೂಡ್ಲಿಗಿ ತಾಲೂಕಿನ ವೀರನದುರ್ಗದ ಕೋಟೆ | ರಾಷ್ಟ್ರೀಯ |
| 7 | National Seminar on Vijayanagara Empire | Osmania University, Hyderabad | 27.12.1999 | The title born by Kings, Ministers and Generals of Vijayanagara Empire | National |
| 8 | ವಿಜಯನಗರ ಅಧ್ಯಯನ ವಿಚಾರಗೋಷ್ಠಿ | ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, | 4.11.2000 | ಶೌರ್ಯ ಪರಾಕಮಗಳನ್ನು ಪ್ರತಿಬಿಂಬಿಸುವಲ್ಲಿ ವಿಜಯನಗರ ಕಾಲದ ಬಿರುದಾವಳಿಗಳು | ರಾಷ್ಟ್ರೀಯ |
| 9 | ಆನೆಗೊಂದಿ ಉತ್ಸವ | ಜಿಲ್ಲಾಡಳಿತ, ಕೊಪ್ಪಳ | 7.12.2001 | ಆನೆಗೊಂದಿ ಪರಿಸರದ ದೇವಾಲಯಗಳು | ರಾಷ್ಟ್ರೀಯ |
| 10 | 11th Annual conference of Fossils | Dept. of Trible Studies, Kannada University, Hampi | 26-28.12.2002 | Participation | National |
| 11 | ರಾಷ್ಟ್ರೀಯ ಸೇವಾ ಯೋಜನೆ ಉಪನ್ಯಾಸ ಕಾರ್ಯಕ್ರಮ, ಮಲಪನಗುಡಿ | ವಿಜಯನಗರ ಕಾಲೇಜು, ಹೊಸಪೇಟೆ | 24.01.2002 | ಮಲಪನಗುಡಿಯ ದೇವಾಲಯ ಮತ್ತು ಶಾಸನಗಳು | ರಾಷ್ಟ್ರೀಯ |
| 12 | ಹೊಸಪೇಟೆ ತಾಲೂಕಿನ ದೇವಾಲಯಗಳು | ವಸ್ತುಸಂಗ್ರಹಾಲಯ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ | 04.01.2003 | ದೇವಾಲಯ ಉಗಮ ಮತ್ತು ವಿಕಾಸ | ರಾಷ್ಟ್ರೀಯ |
| 13 | ವಿಶೇಷ ಉಪನ್ಯಾಸ | ಸರ್ಕಾರಿ ಪದವಿಪೂರ್ವ ವಿದ್ಯಾಲಯ ತುರುವನೂರು ಚಿತ್ರದುರ್ಗ | 10.1.2003 | ವಿಜಯನಗರ ಸಾಮ್ರಾಜ್ಯ : ಇತ್ತೀಚಿನ ಸಂಶೋಧನೆಯ ಹಿನ್ನೆಲೆಯಲ್ಲಿ | ರಾಷ್ಟ್ರೀಯ |



PDF created with pdfFactory trial version www.pdffactory.com

| | | | | | |
|---|---|---|---|---|---|
| 14 | ವಿಜಯನಗರ ಅಧ್ಯಯನ ವಿಚಾರಗೋಷ್ಠಿ 7 (ಹಂಪಿ ಉತ್ಸವ) | ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, | 3.11.2002 | ವಿಜಯನಗರ ಕಾಲದ ರಾಯಭಾರತ್ವ | ರಾಷ್ಟ್ರೀಯ |
| 15 | ವಿಜಯನಗರ ಅಧ್ಯಯನ ವಿಚಾರಗೋಷ್ಠಿ 8 (ಹಂಪಿ ಉತ್ಸವ) | ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, | 4.11.2003 | ವಿಜಯನಗರ ಕಾಲದಲ್ಲಿ ಯುದ್ಧಪ್ರೇರಣೆ | ರಾಷ್ಟ್ರೀಯ |
| 16 | 12th Session of Indian art history congress, Kolkata | National Museum, Kolkata | 8-10. 11.2003 | Jatangi Rameshwara temple at Chitradurga District | ರಾಷ್ಟ್ರೀಯ |
| 17 | ಶಾಸನ ಕಾರ್ಯಗಾರ | ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ | 27-29.01.2003 | **ಯುದ್ಧಕಲೆ** | ರಾಷ್ಟ್ರೀಯ |
| 18 | XVth Conference of South Indian Numismatic Society, Pondicherry | South Indian Numismatic Society, Chennai | 2005 | Two Maharathi Coins of Turuvanur and Chippinakere, Chitradurga | ರಾಷ್ಟ್ರೀಯ |
| 19 | ವಿಜಯನಗರ ಅಧ್ಯಯನ ವಿಚಾರಗೋಷ್ಠಿ 9 (ಹಂಪಿ ಉತ್ಸವ) | ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, | 4.11.2004 | ವಿಜಯನಗರ ಕಾಲದ ನೌಕಾಯುದ್ಧ | ರಾಷ್ಟ್ರೀಯ |
| 20 | ದಶಮಾನೋತ್ಸವ ಸಮಾರಂಭ | ವಾಸವಿ ವಿದ್ಯಾಸಂಸ್ಥೆ, ಕಂಪಿ | 07.02.2004 | ವೈಶ್ಯ ಸಮುದಾಯ ಒಂದು ಚಾರಿತ್ರಿಕ ನೋಟ | ರಾಷ್ಟ್ರೀಯ |
| 21 | ವಿಜಯನಗರ ಸಾಮ್ರಾಜ್ಯದ ಪುನರವಲೋಕನ | ಕೆ.ಆರ್. ಬೆಲ್ಲದ ಕಾಲೇಜು, ಮುಂಡರಗಿ | 2004 | ರಕ್ಕಸಗಿ ತಂಗಡಗಿ ಯುದ್ಧ ಮತ್ತು ನಂತರದ ಬೆಳವಣಿಗೆಗಳು | ರಾಷ್ಟ್ರೀಯ |
| 22 | ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, | ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ | 2004 | ಯುದ್ಧಕಲೆ | ರಾಷ್ಟ್ರೀಯ |
| 23 | XVIth Conference of South Indian Numismatic Society, Kaivara | South Indian Numismatic Society, Chennai | 12.01.2005 | A Lead Coins of Chutukulananda Chippinakere, Chitradurga | ರಾಷ್ಟ್ರೀಯ |
| 24 | ವಿಜಯನಗರ ಸಾಮ್ರಾಜ್ಯ | ಕೇಂಬ್ರಿಡ್ಜ್ ಕರ್ನಾಟಕ ಸಮನ್ವಯ ಇನ್‌ಸ್ಟಿಟ್ಯೂಟ್ ಮೈಸೂರು, | 7-9.02.2005 | ವಿಜಯನಗರ ಕಾಲದ ದಂಡನಾಯಕರು | ರಾಷ್ಟ್ರೀಯ |
| 25 | 16th Annual conference of the South Indian Numismatics | Dravidian University, Kuppam, Andhrapradesh | 21-22.01.2006 | Participation | National |
| 26 | ಕಲ್ಯಾಣ ಕರ್ನಾಟಕದ ಅರಸು ಮನೆತನಗಳು, ರಾಯಚೂರು | ವಸ್ತುಸಂಗ್ರಹಾಲಯ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ | 02.03.2006 | ಕುಮ್ಮಟದ ಅರಸರು | ರಾಷ್ಟ್ರೀಯ |
| 27 | ವಿಜಯನಗರ ಅಧ್ಯಯನ ವಿಚಾರಗೋಷ್ಠಿ (ಹಂಪಿ ಉತ್ಸವ) | ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, | 04.11.2006 | ವಿಜಯನಗರ ಕಾಲದಲ್ಲಿ ಸಿಡಿಮದ್ದಿನ ಬಳಕೆ | ರಾಷ್ಟ್ರೀಯ |
| 28 | ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ ಹಾನಗಲ್ಲು | ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ | 2006 | ಹಾನಗಲ್ಲು ಪರಿಸರದ ವ್ಯಾಪಾರ ಮತ್ತು ವಾಣಿಜ್ಯ | ರಾಷ್ಟ್ರೀಯ |
| 29 | ಚಿತ್ರದುರ್ಗ ಜಿಲ್ಲಾ ಉತ್ಸವ | ಜಿಲ್ಲಾಡಳಿತ, ಕರ್ನಾಟಕ ಸರ್ಕಾರ. ಚಿತ್ರದುರ್ಗ | 09.04.2006 | ಚಿತ್ರದುರ್ಗ ಜಿಲ್ಲೆಯ | ರಾಷ್ಟ್ರೀಯ |



PDF created with pdfFactory trial version www.pdffactory.com

| | | | | | |
|---|---|---|---|---|---|
| | | | | ಪ್ರಾಗೈತಿಹಾಸಿಕ ನೆಲೆಗಳು | |
| 30 | ವಿಚಾರ ಸಂಕಿರಣ | ವಿಶಾಲ ಚಿತ್ರದುರ್ಗ ಇತಿಹಾಸ ಸಂಶೋಧನ ಸಂಸ್ಥೆ ಚಿತ್ರದುರ್ಗ | 13.08.2006 | ಚಿತ್ರದುರ್ಗದ ದೇವಾಲಯಗಳು | ರಾಷ್ಟ್ರೀಯ |
| 31 | A National Workshop on Development of Self learning Meterials for Distance and Online learning | IndiraGandhi National Open University, New Delhi | 28.08.2006 to 02.09.2006 | Participation | ರಾಷ್ಟ್ರೀಯ |
| 32 | ಪುನರ್ಮನನ ಶಿಬಿರ | ಕನ್ನಡ ವಿಶ್ವವಿದ್ಯಾಲಯ, ಹಂಪಿ | 24.02.2006 to 16.03.2006 | ಭಾಗವಹಿಸಲಾಗಿದೆ | ರಾಷ್ಟ್ರೀಯ |
| 33 | ರಾಷ್ಟ್ರೀಯ ಸೇವಾ ಯೋಜನೆ ಉಪನ್ಯಾಸ ಕಾರ್ಯಕ್ರಮ ನೆರೇನಹಾಳು | ಸರ್ಕಾರಿ ಪದವಿಪೂರ್ವ ವಿದ್ಯಾಲಯ ಚಿತ್ರದುರ್ಗ | 15.10.2006 | ನೆರೇನಹಾಳು ಗ್ರಾಮ ಪರಿಸರದ ಪ್ರಾಚೀನ ಇತಿಹಾಸ | ರಾಷ್ಟ್ರೀಯ |
| 34 | ಕುಮ್ಮಟದ ನಾಯಕರು ವಿಚಾರ ಸಂಕಿರಣ, ಕೊಪ್ಪಳ | ವಾಲ್ಮೀಕಿ ಅಧ್ಯಯನ ಪೀಠ ಕನ್ನಡ ವಿಶ್ವವಿದ್ಯಾಲಯ, ಹಂಪಿ | .04.2007 | ಕುಮ್ಮಟ ಪರಿಸರದ ಪ್ರಾಚೀನ ಚರಿತ್ರೆ | ರಾಷ್ಟ್ರೀಯ |
| 35 | ರಾಷ್ಟ್ರೀಯ ಭಾಷಾಂತರ ಕಮ್ಮಟ, ಬೆಂಗಳೂರು | ದೂರಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ | 29-30.01.2007 | ಭಾಗವಹಿಸಲಾಗಿದೆ | |
| 36 | ವಿಶೇಷ ಉಪನ್ಯಾಸ | ಕನ್ನಡ ಸಾಹಿತ್ಯ ಪರಿಷತ್ತು, ಹೊಸಪೇಟೆ | 2007 | ಹೊಸಪೇಟೆ ತಾಲೂಕಿನ ದೇವಾಲಯಗಳು | ರಾಷ್ಟ್ರೀಯ |
| 37 | ಶ್ರೀ ಸಿ.ಟಿ.ಎಂ.ಕೊಟ್ರಯ್ಯ ದತ್ತಿ ಉಪನ್ಯಾಸ | ವಸ್ತುಸಂಗಹಾಲಯ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ | 2007 | ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ | ರಾಷ್ಟ್ರೀಯ |
| 38 | ೨೧ನೇ ಕರ್ನಾಟಕ ಇತಿಹಾಸ ಅಕಾಡೆಮಿ ಸಮ್ಮೇಳನ, ಹಗರಿಬೊಮ್ಮನಹಳ್ಳಿ | ಕರ್ನಾಟಕ ಇತಿಹಾಸ ಅಕಾಡೆಮಿ ಹಗರಿಬೊಮ್ಮನಹಳ್ಳಿ | 2007 | ನೆರೆನಹಾಳು ಪರಿಸರದಲ್ಲಿ ಬೃಹತ್ ಶಿಲಾಗೋರಿ ಪತ್ತೆ | ರಾಷ್ಟ್ರೀಯ |
| 39 | ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ, ಜಗಳೂರು, | ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ | 2008 | ಭೌಗೋಳಿಕತೆ ಮತ್ತು ಪ್ರಾಗಿತಿಹಾಸ : ಜಗಳೂರು | ರಾಷ್ಟ್ರೀಯ |
| 40 | ಪುನಶ್ಚೇತನ ಶಿಬಿರ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | 18.08.2008 to 15.08.2008 | ಭಾಗವಹಿಸಲಾಗಿದೆ | ರಾಷ್ಟ್ರೀಯ |
| 41 | ೪ನೇ ಕನ್ನಡ ವಿಜ್ಞಾನ ಸಮ್ಮೇಳನ | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ, | 16.09,2008 | ವಿಜಯನಗರದ ನಗರ ನೀರು ಸರಬರಾಜು ತಂತ್ರಜ್ಞಾನ | ರಾಷ್ಟ್ರೀಯ |
| 42 | National Seminar on The recent Global recession and its impact on emerging Indian Economy, Shimoga | Dept. of Economics Kuvempu University,Shimoga | 03.04.2009 | Participation | National |
| 43 | National Seminar on Special Economic Zone-An Indian Perspective, Hospet | Dept. of Economics Vijayanagar College, Hospet | 25.09.2009 to 26.09.2009 | Participation | National |

**೧೭. ಎಂ.ಫಿಲ್. ಮಾರ್ಗದರ್ಶನ**

೧. ನಾಗರಾಜಪ್ಪ, ಎಸ್ **ಚಿತ್ರದುರ್ಗ ಪರಿಸರದ ದೇವಾಲಯಗಳು,** ಎಂ.ಫಿಲ್, ೨೦೦೭-೦೮

ಚಿತ್ರದುರ್ಗ ಪರಿಸರದ ದೇವಾಲಯಗಳು ಕುರಿತ ಪ್ರಸ್ತುತ ಎಂ.ಫಿಲ್ ಪ್ರೌಢಪ್ರಬಂಧವು ಚಿತ್ರದುರ್ಗ ಬೆಟ್ಟ ಪರಸರದಲ್ಲಿರುವ ಎಲ್ಲ ಬಗೆಯ ದೇವಾಲಯಗಳು, ಮೂರ್ತಿಶಿಲ್ಪಗಳು, ವೀರಗಲ್ಲು, ಮಾಸ್ತಿಗಲ್ಲು ಮೊದಲಾದ



PDF created with pdfFactory trial version www.pdffactory.com

ಪ್ರಾಚೀನ ಅವಶೇಷಗಳನ್ನು ಕುರಿತಿದೆ. ಅಲ್ಲದೆ ಈ ಪರಿಸರದಲ್ಲಿ ಆಚರಣೆಯಲ್ಲಿದ್ದ ವಿವಿಧ ಧಾರ್ಮಿಕ ಪಂಥಗಳ ಕುರಿತ ಚರ್ಚೆಯನ್ನು ಇಲ್ಲಿ ನಡೆಸಲಾಗಿದೆ.

೨. ಬಿ.ಟಿ. ಚಾರುಲತ **ಇಂಗಳದಾಳು: ಗಣಿಗಾರಿಕೆ ಅಧ್ಯಯನ,** ಎಂ.ಫಿಲ್, ೨೦೦೭–೦೮

ಚಿತ್ರದುರ್ಗ ತಾಲೂಕಿನ ಇಂಗಳದಾಳು ಗ್ರಾಮವು ಪ್ರಸಿದ್ಧವಾಗಿರುವುದು. ಗಣಿಗಾರಿಕೆಯಿಂದ. ಅದರಲ್ಲೂ ಅದು ಪ್ರಸಿದ್ಧಿ ಹೊಂದಿರುವುದು ತಾಮ್ರದ ಗಣಿಯಿಂದ. ಇದು ಕರ್ನಾಟಕದ ಪ್ರಾಚೀನ ಗಣಿಯಾಗಿರುವುದು ಗಮನಾರ್ಹ. ಈ ವಿಷಯವನ್ನಾಧರಿಸಿ ನಡೆಸಿರುವ ಈ ಸಂಶೋಧನೆಯು ಇಂಗಳದಾಳು ಗಣಿಗಾರಿಕೆಯು ಚಾರಿತ್ರಿಕವಾಗಿ ಬೆಳೆದು ಬಂದ ಬಗೆ, ಇತ್ತೀಚೆಗೆ ಆಧುನಿಕ ಸಂದರ್ಭದಲ್ಲಿ ಅದು ನಿರ್ವಹಿಸಿದ ಪಾತ್ರ, ಅಲ್ಲಿನ ತಾಮ್ರದ ಗಣಿ, ಅದರಿಂದಾದ ಉಪಯೋಗ, ಅದು ಒದಗಿಸಿದ ಉದ್ಯೋಗ ಮೊದಲಾದ ವಿವರಗಳನ್ನು ಇಲ್ಲಿ ವಿಮರ್ಶಿಸಿ ವಿಶೇಷಿಸಲಾಗಿದೆ.

೩. ಸಂಜಯ ಹಂಜೆ **ಗೋಕಾಕ ತಾಲೂಕಿನಲ್ಲಿ ಜೈನಧರ್ಮ,** ಎಂ.ಫಿಲ್, ೨೦೦೮–೦೯

ಗೋಕಾಕ ತಾಲೂಕು ಬೆಳಗಾವಿ ಜಿಲ್ಲೆಯ ಬಹಳ ಪ್ರಮುಖ ಜೈನ ಕೇಂದ್ರವಾಗಿದೆ. ಇಲ್ಲಿ ಇಂದಿಗೂ ಜೈನ ಧರ್ಮಕ್ಕೆ ಸಂಬಂಧಿಸಿದ ಅನೇಕ ಪ್ರಾಚೀನ ಜಿನಾಲಯಗಳು, ಜಿನ ಮೂರ್ತಿಗಳು ಮೊದಲಾದ ಅವಶೇಷಗಳು ಇವೆ. ಇವುಗಳ ಮಹತ್ವವನ್ನು ಅರಿಯುವ ದೃಷ್ಟಿಯಿಂದ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೪. ಶಂಕ್ರಪ್ಪ ಮೌನೇಶ್ವರ ಬಡಿಗೇರ **ಶಿರಹಟ್ಟಿ ಪರಿಸರದ ಇತಿಹಾಸ ಮತ್ತು ಪುರಾತತ್ವ,** ಎಂ.ಫಿಲ್, ೨೦೦೮–೦೯

ಶಿರಹಟ್ಟಿಯು ಗದಗ ಜಿಲ್ಲೆಯ ತಾಲೂಕುಗಳಲ್ಲಿ ಒಂದು. ಇದು ಐತಿಹಾಸಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಪ್ರಸಿದ್ಧವಾಗಿದೆ. ಈ ತಾಲೂಕು ಪರಿಸರವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದ್ದು, ಇಲ್ಲಿ ಬರುವ ಎಲ್ಲ ಬಗೆಯ ಪ್ರಾಚೀನ ಕುರುಹುಗಳನ್ನು ದಾಖಲಿಸಿ ಅವುಗಳ ಮಹತ್ವವನ್ನು ತಿಳಿಯಪಡಿಸುವ ಅಧ್ಯಯನವಿದು.

**೧೭. ಪಡೆದ ಪ್ರಶಸ್ತಿ, ಮನ್ನಣೆ**

೦೧. ಕರ್ನಾಟಕ ಇತಿಹಾಸ ಅಕಾಡೆಮಿಯ ೧೫ನೇ ವಾರ್ಷಿಕ ಸಮ್ಮೇಳನ, ಉಡುಪಿ, ಅಕ್ಟೋಬರ್ ೧೩, ೨೦೦೧

೦೨. ದ್ವಿತೀಯ ಚಿತ್ರದುರ್ಗ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ, ಕೂನಬೇವು, ಮಾರ್ಚ್ ೧–೨, ೨೦೦೨

**೧೮. ಶೈಕ್ಷಣಿಕ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯ ಹೊರತುಪಡಿಸಿ ನಿರ್ವಹಿಸಿದ ಯೋಜನೆಗಳು**

೧. **ಕೃಷ್ಣಾ ಮೇಲ್ದಂಡೆ ಯೋಜನೆಯ ಮುಳುಗಡೆ ಗ್ರಾಮಗಳ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ,** ನೆರವು : ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟೆ

ಕೃಷ್ಣಾ ಮೇಲ್ದಂಡೆ ಯೋಜನೆಯ ಮುಳುಗಡೆ ಗ್ರಾಮಗಳ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನವೆಂಬುದು ಆಲಮಟ್ಟಿ ಅಥವಾ ಲಾಲ್ ಬಹದ್ದೂರ್ ಶಾಸ್ತ್ರಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಿದ ಗ್ರಾಮಗಳು ಹಾಗೂ ಅಲ್ಲಿನ ಪ್ರಾಚೀನ ಸ್ಮಾರಕಗಳ ದಾಖಲೆಯಾಗಿದೆ. ಈ ಜಲಾಶಯದಲ್ಲಿ ೨೦೦ ಗ್ರಾಮಗಳು ಮುಳುಗಡೆಯಾಗುವ ಹಿನ್ನೆಲೆಯಲ್ಲಿ ಅವುಗಳ ಅಧ್ಯಯನ ಬಹಳ ಸೂಕ್ತವೆಂಬುದನ್ನು ಅರಿತು ಕೃಷ್ಣಾ ಮೇಲ್ದಂಡೆ ಅಭಿವೃದ್ಧಿ ಪ್ರಾಧಿಕಾರಗಳ ನೆರವಿನಿಂದ ಈ ಬೃಹತ್ ಯೋಜನೆಯನ್ನು ರೂಪಿಸಲಾಗಿದೆ.



PDF created with pdfFactory trial version www.pdffactory.com

೨. **ಹಂಪಿ ವಿಜಯನಗರ ಪರಾಮರ್ಶನ ಗ್ರಂಥಲೇಖನ ಸೂಚಿ**, ನೆರವು: ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ನವದೆಹಲಿ

ವಿಜಯನಗರ ಸಾಮ್ರಾಜ್ಯವು ಮಧ್ಯಯುಗದ ಅತ್ಯಂತ ಪ್ರಬಲ ಹಾಗೂ ಪ್ರಮುಖ ಸಾಮ್ರಾಜ್ಯವಾಗಿದೆ. ಈ ಸಾಮ್ರಾಜ್ಯವು ಸುಮಾರು ೨೫೦ ವರ್ಷಗಳ ಆಳ್ವಿಕೆಯನ್ನು ದಕ್ಷಿಣ ಭಾರತದಲ್ಲಿ ನಡೆಸಿ ತನ್ನ ಪಾರಮ್ಯವನ್ನು ನಾಡಿನೆಲ್ಲೆಡೆ ಮೆರೆದಿದೆ. ಇದಕ್ಕೆ ಸಾಕ್ಷಿಯಾಗಿ ಸ್ಮಾರಕಾವಶೇಷಗಳು, ಶಾಸನಗಳು, ಸಾಹಿತ್ಯ ಕೃತಿಗಳು ಇಂದಿಗೂ ಉಳಿದುಬಂದಿವೆ. ಈ ಆಕರಗಳ ಕುರಿತ ಅಧ್ಯಯನ ಹಾಗೂ ವಿಶ್ಲೇಷಣೆಗಳು ಸಾಕಷ್ಟು ಆಗಿರುವುದನ್ನು ಹೊರಬಂದಿರುವ ಕೃತಿಗಳಿಂದ ತಿಳಿಯಬಹುದು. ಇಂತಹ ಪ್ರಕಟಣೆಗಳ ದಾಖಲಾತಿಯೇ ಹಂಪಿ ವಿಜಯನಗರ ಗ್ರಂಥಲೇಖನ ಸೂಚಿ. ಇಲ್ಲಿ ಇದುವರೆಗೆ ಹಂಪಿ ಹಾಗೂ ವಿಜಯನಗರ ಸಾಮ್ರಾಜ್ಯವನ್ನು ಕುರಿತಂತೆ ಹೊರಬಂದಿರುವೆಲ್ಲ ಬಗೆಯ ಕೃತಿಗಳು, ಆಕರಸಾಮಗ್ರಿಗಳನ್ನು ಓದುಗರಿಗೆ, ಸಂಶೋಧಕರಿಗೆ ಒದಗಿಸಿಕೊಡುವ ಉದ್ದೇಶದಿಂದ ನವದೆಹಲಿಯ ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರದ ನೆರವಿನೊಂದಿಗೆ ಈ ಯೋಜನೆಯನ್ನು ಪೂರೈಸಲಾಗಿದೆ.

**೧೯. ನಿರ್ವಹಿಸಿದ ಇತರೆ ಕೆಲಸಗಳು**

**೧. ಆಡಳಿತಾತ್ಮಕ ಕೆಲಸಗಳು**

೧. **ಮುಖ್ಯಸ್ಥ,** ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ (ಜುಲೈ ೨೦೧೦ರಿಂದ), ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. **ಸಹಾಯಕ ನಿರ್ದೇಶಕ** (೨೦೦೫ ರಿಂದ ೨೦೦೭, ೨೦೦೯) ಪ್ರತಿನಿಯೋಜನೆ ದೂರಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. **ಮುಖ್ಯ ಪರೀಕ್ಷಾಧಿಕಾರಿ** (೨೦೦೮–೦೯ನೇ ಸಾಲಿನ ಪರೀಕ್ಷೆ), ದೂರಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**೨. ಹೆಚ್ಚಿನ ಜವಾಬ್ದಾರಿಗಳು**

೧. **ಅಧ್ಯಕ್ಷ,** ಅಧ್ಯಯನ ಮಂಡಳಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ (ಜುಲೈ ೨೦೦೯ ರಿಂದ), ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. **ಅಧ್ಯಕ್ಷ,** ಪರೀಕ್ಷಾ ಮಂಡಳಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ (ಜುಲೈ ೨೦೦೯ ರಿಂದ), ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. **ಅಧ್ಯಕ್ಷ,** ಪರೀಕ್ಷಾ ಮಂಡಳಿ, ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಡಿಪ್ಲೋಮಾ(ಜುಲೈ ೨೦೦೯ ರಿಂದ), ದೂರಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. **ಸಂಚಾಲಕ,** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪ್ರವಾಸಿ ಮಾರ್ಗದರ್ಶಕರ ತರಬೇತಿ ಕಾರ್ಯಕ್ರಮ, ೧ ಮತ್ತು ೨, ಅಗಸ್ಟ್ ೨೦೦೯ ಮತ್ತು ಮಾರ್ಚ್ ೨೦೧೦, ದೂರಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ



PDF created with pdfFactory trial version www.pdffactory.com